# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
## ಯಲಹಂಕ ವಲಯ

ಸಂಖ್ಯೆ: ಬಿಬಿಎಂಪಿ/ಅ.ಆ/ಯ.ವ/ಆ.ಅ(ಬ್ಯಾ.ವಿ)/ AS-1035 /14-15

ಅಪರ ಆಯುಕ್ತರು ರವರ ಕಛೇರಿ
ಯಲಹಂಕ ವಲಯ,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು-92
ದಿನಾಂಕ: 5-9-2014

## ಆಡಳಿತಾತ್ಮಕ ಅನುಮೋದನೆ

**ವಿಷಯ:** Construction of RCC Drain at Agrahara Layout in Ward No: 05 Byatarayanapura Sub Division.

**ಉಲ್ಲೇಖ:- 1)** ಮುಖ್ಯ ಆರ್ಥಿಕ ಅಧಿಕಾರಿಗಳು ಜೆ.ಎನ್.ಯು.ಆರ್.ಎಂ ರವರ ಕಾಮಗಾರಿ ಸಂಕೇತ :005-13-000072

2) ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:20-08-2014 ರಂದು ನಡೆದ ಸಭೆಯ ನಡವಳಿಗಳು ವಿಷಯ ಸಂಖ್ಯೆ:ತೆಆಸ್ಥಾಸ/26/2014-15

**********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕಾರ್ಯಪಾಲಕ ಅಭಿಯಂತರರು (ಬ್ಯಾಟರಾಯನಪುರ ವಿಭಾಗ) ರವರು 2014-15ನೇ ಸಾಲಿನ ಕೆ.ಪಿ.ಡಬ್ಲ್ಯೂ.ಡಿ ಎಸ್.ಆರ್, ದರಪಟ್ಟಿಯನ್ವಯ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಯಲಹಂಕ ವಲಯ ವಾರ್ಡ್ ಸಂಖ್ಯೆ:05 ರಲ್ಲಿ ಮೇಲ್ಕಂಡ ಕಾಮಗಾರಿಯನ್ನು ಕೈಗೊಳ್ಳಲು ರೂ:300.00 ಲಕ್ಷಗಳಿಗೆ ಅಂದಾಜುಪಟ್ಟಿಯನ್ನು ತಯಾರಿಸಿ ಆಡಳಿತಾತ್ಮಕ ಮಂಜೂರಾತಿಗಾಗಿ ಸಲ್ಲಿಸಿರುತ್ತಾರೆ.

ಸದರಿ ಕಾಮಗಾರಿಗೆ ಉಲ್ಲೇಖ(2)ರಲ್ಲಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯು ಸದರಿ ಕಾಮಗಾರಿಯನ್ನು ತುರ್ತಾಗಿ ಕೆ.ಆರ್.ಐ.ಡಿ.ಎಲ್ ಸಂಸ್ಥೆ ವತಿಯಿಂದ ಕೈಗೊಳ್ಳಲು ಅನುಮೋದನೆ ದೊರತ್ತಿದ್ದು, ಉಲ್ಲೇಖ(1)ರಲ್ಲಿ ಈಗಾಗಲೇ ಸದರಿ ಕಾಮಗಾರಿಗೆ ಲೆಕ್ಕ ಶೀರ್ಷಿಕೆ ಪಿ-2723 ಅಡಿಯಲ್ಲಿ ಜಾಬ್ ಸಂಕೇತ ದೊರತ್ತಿರುತ್ತದೆ. ಆದುದರಿಂದ ಮಾನ್ಯ ಆಯುಕ್ತರವರ ಆದೇಶ ಸಂಖ್ಯೆ:ಬಿ12(1)ಪಿಆರ್/394/2011-12 ದಿನಾಂಕ:28-09-2013ರಲ್ಲಿ ನೀಡಿರುವ ಅಧಿಕಾರದನ್ವಯ ಅಂದಾಜುಪಟ್ಟಿಯನ್ನು ಆಡಳಿತಾತ್ಮಕ ಅನುಮೋದನೆಯ ಪುಸ್ತಕದ ಪುಟ ಸಂಖ್ಯೆ: 162 ಕ್ರಮ ಸಂಖ್ಯೆ: 1035 ರಲ್ಲಿ ಈ ಕೆಳಗಿನ ಷರತ್ತುಗಳಂತೆ ದಾಖಲಿಸಲಾಗಿದೆ.

**ಷರತ್ತುಗಳು:-**

1. ಅಂದಾಜಿನಲ್ಲಿ ಅಳವಡಿಸಿರುವ ಮಾರುಕಟ್ಟೆ ದರಗಳಿಗೆ ಹಾಗೂ ದರಪಟ್ಟಿಯಲ್ಲಿ ದರ ಲಭ್ಯವಿಲ್ಲದ ಬಾಬ್ತುಗಳಿಗೆ ಮೂಲಾಧಾರಿತ ದರ ಹಾಗೂ ಕೋಟೇಷನ್‌ಗಳನ್ನು ತಯಾರಿಸಿ, ಸಕ್ಷಮ ಅಧಿಕಾರಿಗಳಿಂದ ಅನುಮೋದನೆ ಪಡೆಯತಕ್ಕದ್ದು.
2. ಅಂದಾಜಿನಲ್ಲಿ ಪರಿಮಾಣಗಳನ್ನು ಮತ್ತು ದರಗಳನ್ನು ಮತ್ತೊಮ್ಮೆ ಪರಿಶೀಲಿಸಿಕೊಳ್ಳತಕ್ಕದು,
3. ಇತ್ತೀಚಿನ ಪಾರದರ್ಶಕ ನಿಯಮಾವಳಿಯ ಪ್ರಕಾರವೇ ಸದರಿ ಕಾಮಗಾರಿಯನ್ನು ಕೈಗೊಳ್ಳುವಲ್ಲಿ ಸೂಕ್ತಕ್ರಮ ಅನುಸರಿಸತಕ್ಕದ್ದು.
4. ಅಂದಾಜುಪಟ್ಟಿಯ ಮೊತ್ತವು ಮಂಜೂರಾತಿಯಾದ ಮೊತ್ತಕ್ಕಿಂತ ಮೀರಿರಬಾರದು.
5. ಕಾಮಗಾರಿಗೆ ಮಂಜೂರಾದ ಮೊತ್ತದ ಹಣವನ್ನು ಅದೇ ಕಾಮಗಾರಿಗೆ ಉಪಯೋಗಿಸತಕ್ಕದ್ದು.
6. ಕಾಮಗಾರಿಯನ್ನು ಮೌಲ್ಯ ಪ್ರಮಾಣ ವಿವರಣೆಯ (Standard Specification) ಪ್ರಕಾರ ನಿರ್ವಹಿಸತಕ್ಕದ್ದು.
7. ಕರಾರಿನಲ್ಲಿರುವಂತೆ ವೆಚ್ಚವನ್ನು ನಿರ್ಬಂಧಿಸತಕ್ಕದ್ದು.
8. ಇಡುಗಂಟು ಅಳವಡಿಕೆಯಲ್ಲಿ ಇರುವ ಮೊತ್ತಕ್ಕೆ ವಿಸ್ತಾರವಾಗಿ ತಯಾರಿಸಿ ಅನುಮೋದನೆಯನ್ನು ಪಡೆಯತಕ್ಕದ್ದು.
9. ಪ್ರಮಾಣೀಕರಿಸಿದ ಸಾಗಾಣಿಕೆ ಪಟ್ಟಿ ಹಾಗೂ ನಿಯೋಜಿತ ವಿಲೇವಾರಿ ಸ್ಥಳಗಳಿಗೆ ಅನುಮೋದನೆಯನ್ನು ಪಡೆಯತಕ್ಕದ್ದು.

ಅಪರ ಆಯುಕ್ತರು
ಯಲಹಂಕ ವಲಯ

ಅಪರ ಆಯುಕ್ತರು
ಯಲಹಂಕ ವಲಯ,

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬ್ಯಾಟರಾಯನಪುರ, ಬೆಂಗಳೂರು-92

**ಪ್ರತಿಯನ್ನು:**

1. ಕಾರ್ಯಪಾಲಕ ಅಭಿಯಂತರರು, (ಬ್ಯಾಟರಾಯನಪುರ ವಿಭಾಗ) ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ.